# ನಗುವ ಬುದ್ಧ



**ದೊ**ಡ್ಡ ಹೊಟ್ಟೆಯ, ಜೋರಾಗಿ ನಗುವ ಬುದ್ಧನ ಪ್ರತಿಮೆಯನ್ನು ನೀವೆಲ್ಲರೂ ನೋಡಿರಬಹುದು. ಅವನನ್ನು ''ನಗುವ ಬುದ್ಧ''ನೆಂದೇ ಕರೆಯುತ್ತಾರೆ. ಈ ವಿಚಿತ್ರ ರೂಪದ, ವಿಕ್ಷಿಪ್ತ ವ್ಯಕ್ತಿ ನಿಜಕ್ಕೂ ಯಾರು?

## ಹಿನ್ನೆಲೆ

ಮೊದಲು ಈತನಿಗೆ ಹೊತ್ಯೆ, ಬುಡೈ ಅಥವಾ ಪು–ಟೈ (ಚೀನಾದಲ್ಲಿ) ಎಂಬ ಹೆಸರಿತ್ತು. ಅನಂತರ **'ನಗುವ ಬುದ್ಧ'**ನೆಂಬ ಹೆಸರೇ ಜನಪ್ರಿಯವಾಯಿತು. ಸುಮಾರು ಒಂದು ಸಾವಿರ ವರ್ಷಗಳಿಗೆ ಹಿಂದೆ ಚೀನಾದಲ್ಲಿ ಬದುಕಿದ್ದ ವಿಚಿತ್ರ ಸ್ವಭಾವದ ಸಂನ್ಯಾಸಿಯ ರೂಪವನ್ನಾಧರಿಸಿ, ನಗುವ ಬುದ್ಧನ ಮೂರ್ತಿಯನ್ನು ಮಾಡಲಾಗಿದೆ. ಬೌದ್ಧ ಮತ್ತು ಶಿಂಟೋ ಸಂಸ್ಕೃತಿಗಳಲ್ಲಿ ಈ ಮೂರ್ತಿ ಪ್ರಮುಖವಾದ ಸಂಕೇತವಾಗಿದೆ.

ಅಕ್ಷರಶಃ ಪು–ಟೈ ಎಂದರೆ ಚಿಂದಿಬಟ್ಟೆಯ ಚೀಲ ಎಂದರ್ಥ. ನಿಜವಾಗಿ ಪು–ಟೈ ಎಂಬವನು ಅನುಕಂಪದಿಂದ ಕೂಡಿದ, ಉದಾರ ಹೃದಯದ ಝೆನ್ ಸಂತ. ಭವಿಷ್ಯದಲ್ಲಿ ಬರುವ ಬುದ್ಧನಾದ ಮೈತ್ರೇಯನೇ ಅವನು ಎನ್ನುವುದೂ ಇದೆ. ಅವನ ಉದಾರವಾದ ನಗು ಅವನಿಗೆ 'ನಗುವ ಬುದ್ಧ'ನೆಂಬ ಅಡ್ಡ ಹೆಸರನ್ನು ತಂದಿತು.

## ನಗುವ ಬುದ್ಧನ ಕಥೆ

ಹಳೆಯ ದಂತಕತೆಗಳ ಪ್ರಕಾರ ಪು–ಟೈ ಸದಾ ಆನಂದ ದಿಂದಿದ್ದ ಬೌದ್ಧ ಸಂನ್ಯಾಸಿ; ಅವನು ಊರಿಂದೂರಿಗೆ ಅಲೆದಾಡುತ್ತಿದ್ದ. ಹೋದಲೆಲ್ಲ ಶಾಂತಿ, ಆನಂದಗಳನ್ನು ಹರಡುತ್ತಿದ್ದ. ಜನ ಅವನತ್ತ ಆಕರ್ಷಿತರಾದರು. ಅವನ ಸುತ್ತ ಮಕ್ಕಳು ಮುತ್ತುತ್ತಿದ್ದರು. ಅವನ ಚೀಲದಲ್ಲಿ ಸಿಹಿತಿಂಡಿ, ಆಟಿಕೆಗಳಿರುತ್ತಿದ್ದವು. ಅವುಗಳನ್ನು ಮಕ್ಕಳಿಗೆ ಹಂಚುತ್ತಿದ್ದ. ಅನಂತರ ಚೀಲವನ್ನು ಎಸೆದು, ಆಕಾಶದತ್ತ ನೋಡಿ ಜೋರಾಗಿ ನಗುತ್ತಿದ್ದ. ಅವನ ನಗುವನ್ನು ಕೇಳಿದ ಜನರೆಲ್ಲ ನಗುವ ಜಾಡ್ಯಕ್ಕೆ ಒಳಗಾಗಿ, ಬಿದ್ದು ಬಿದ್ದು ನಗತೊಡಗುತ್ತಿದ್ದರು. ಹೀಗೆ ಊರೆಲ್ಲ ನಗುತ್ತಿದ್ದಾಗ ಅವನು ಸದ್ದಿಲ್ಲದೆ ಚೀಲವನ್ನೆತ್ತಿಕೊಂಡು ಇನ್ನೊಂದು ಊರಿಗೆ ಹೋಗುತ್ತಿದ್ದ. ಹೀಗೆ ಅವನು ಎಲ್ಲೆಡೆ ಶಾಂತಿ, ಆನಂದಗಳನ್ನು ಹರಡುತ್ತಿದ್ದ.

ಪು–ಟೈ ಮಿತಭಾಷಿ. ಸಿಹಿತಿಂಡಿ ಹಂಚುತ್ತಿದ್ದುದರ ಅರ್ಥವೇನೆಂದರೆ, 'ನೀನು ಕೊಟ್ಟಷ್ಟೂ ನಿನಗೆ ಮರಳಿ ಬರುವುದು.' ಚೀಲವೇ ಜನರ ಸಮಸ್ಯೆಗಳಿಗೆ ಸಂಕೇತ. ಅವುಗಳಿಗಾಗಿ ಚಿಂತಿಸುವ ಬದಲು, ಅವನ್ನು ದೂರ ಬಿಸುಟು, ಎಲ್ಲವನ್ನೂ ಮರೆತು ನಗಬೇಕು. ಏಕೆಂದರೆ, ಅತ್ತರೂ ಸರಿ, ನಕ್ಕರೂ ಸರಿ; ಸಮಸ್ಯೆ ಮಾತ್ರ ಹಾಗೆಯೇ ಇರುತ್ತದೆ. ನಗುವಿನ ಪರಿಣಾಮ ಅತ್ಯದ್ಭುತ. ಅದರಿಂದ ದೇಹ, ಮನಸ್ಸು ಹೆಚ್ಚು ವಿಶ್ರಾಂತಿ ಪಡೆಯುತ್ತವೆ. ಸಮಸ್ಯೆಗಳು ಹಗುರವಾಗುತ್ತವೆ. ಸಹಸ್ರ ವರ್ಷಗಳಿಗೂ ಮುನ್ನ ಆ ವ್ಯಕ್ತಿಯ ತಿಳುವಳಿಕೆ ಆಶ್ಚರ್ಯ ಹುಟ್ಟಿಸುತ್ತದೆ. ಏಕೆಂದರೆ, ನಗುವಿನಿಂದ ಉತ್ತಮ ಹಾರ್ಮೋನುಗಳು ಉತ್ಪನ್ನವಾಗಿ, ದೇಹದ ಆರೋಗ್ಯ ಉತ್ತಮಗೊಳ್ಳುವುದೆಂದು ಈಚೆಗೆ ವೈದ್ಯಕೀಯ ವಿಜ್ಞಾನ ಹೇಳುತ್ತದೆ.

ನಗುವ ಬುದ್ಧನ ಸಾವಿನಲ್ಲೂ ಅತಿದೊಡ್ಡ ವಿನೋದವಿತ್ತು. ಸತ್ತ ನಂತರ ತನ್ನ ದೇಹವನ್ನು ಸುಡಲು ಅವನು ಹೇಳಿದ. ಝೆನ್ ಪದ್ಧತಿ ಪ್ರಕಾರ ಸತ್ತವರನ್ನು ಸುಡುತ್ತಿರಲಿಲ್ಲ. ಆದರೂ ಅವನ ಬಯಕೆಯಂತೆ ಅವನ ದೇಹವನ್ನು ಸುಟ್ಟರು. ಶವಕ್ಕೆ ಬೆಂಕಿ ಹತ್ತಿಸಿದೊಡನೆ ಎಲ್ಲೆಡೆ ಪಟಾಕಿ ಸಿಡಿಯತೊಡಗಿತು! ತನ್ನ ಬಟ್ಟೆಯೊಳಗೆಲ್ಲ ತುಂಬಾ ಸಿಡಿಮದ್ದನ್ನು ತುಂಬಿಕೊಂಡಿದ್ದ ಪು–ಟೈ !

ಹೀಗೆ ಮಸಣದಲ್ಲೂ ನಗುತ್ತಲೇ ಮಣ್ಣಾದ 'ನಗುವ ಬುದ್ಧ.'

*ಸಂಗ್ರಹ : **ಸ್ವಾಮಿ ಪುಣ್ಯಾತ್ಮಾನಂದ***